**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ವಿದ್ಯಾರಣ್ಯ-೫೮೩ ೨೭೬**

**ಸೆಪ್ಟೆಂಬರ್ ೦೭, ೨೦೨೨ರ ಬುಧವಾರದಂದು ನಡೆದ ಕಾರ್ಯಕಾರಿ ಸಮಿತಿ ೨೧೪ನೇ (ತುರ್ತು) ಸಭೆಯ ನಡೆವಳಿಗಳು**

೦೧. ಡಾ. ಸ.ಚಿ.ರಮೇಶ, ಮಾನ್ಯ ಕುಲಪತಿಗಳು, ಕವಿಹಂ : ಅಧ್ಯಕ್ಷರು
೦೨. ಪ್ರೊ. ಹೆಚ್.ಎಸ್. ರಘುನಾಥ, ಶಿವಮೊಗ್ಗ : ಸದಸ್ಯರು
೦೩. ಪ್ರೊ. ಹೆಚ್.ಎಂ. ಚನ್ನಪ್ಪಗೋಳ, ಬೆಳಗಾವಿ : ಸದಸ್ಯರು
೦೪. ಪ್ರೊ. ಜಿ.ಸಿ. ರಾಜಣ್ಣ, ಮೈಸೂರು : ಸದಸ್ಯರು
೦೫. ಶ್ರೀಮತಿ ನಯನಾ ಎಸ್., ಬೆಂಗಳೂರು : ಸದಸ್ಯರು
೦೬. ಶ್ರೀ ಪ್ರಶಾಂತ್ ಭೀಮಯ್ಯ, ಮಡಿಕೇರಿ : ಸದಸ್ಯರು
೦೭. ಶ್ರೀ ಜೈಭೀಮ್ ಆರ್.ಕಟ್ಟಿ, ಕಲಬುರಗಿ : ಸದಸ್ಯರು
೦೮. ಡಾ. ಓ. ಓಬಯ್ಯ, ಬೆಂಗಳೂರು : ಸದಸ್ಯರು
೦೯. ಶ್ರೀ ಸಮಿಉಲ್ಲಾ ಖಾನ್, ಬೆಂಗಳೂರು : ಸದಸ್ಯರು
೧೦. ಡಾ. ಎಫ್.ಟಿ. ಹಳ್ಳಿಕೇರಿ, ಡೀನ್, ಭಾಷಾ ನಿಕಾಯ, ಕವಿಹಂ : ಸದಸ್ಯರು
೧೧. ಡಾ. ಕೆ.ರವೀಂದ್ರನಾಥ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ : ಸದಸ್ಯರು
೧೨. ಡಾ. ಮಾಧವ ಪೆರಾಜೆ, ವಿಜ್ಞಾನಗಳ ನಿಕಾಯ, ಕವಿಹಂ : ಸದಸ್ಯರು
೧೩. ಡಾ. ರಮೇಶ ನಾಯಕ, ಹಣಕಾಸು ಅಧಿಕಾರಿಗಳು, ಕವಿಹಂ : ವಿಶೇಷ ಆಹ್ವಾನಿತರು
೧೪. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ : ಪದನಿಮಿತ್ತ ಕಾರ್ಯದರ್ಶಿ

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

೦೧. ಡಾ. ಸಿ.ಎಸ್. ವಾಸುದೇವನ್, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ : ಸದಸ್ಯರು
೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
೦೩. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು : ಸದಸ್ಯರು
೦೪. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು : ಸದಸ್ಯರು
೦೫. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು : ಸದಸ್ಯರು
೦೬. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು : ಸದಸ್ಯರು

ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಆರಂಭದಲ್ಲಿ ಸಭೆಗೆ ಸ್ವಾಗತಿಸಿದರು. ನಂತರ ಇತ್ತೀಚೆಗೆ ನಿಧನರಾದ ಶ್ರೀ ಉಮೇಶ್ ವ್ಹಿ. ಕತ್ತಿ, ಆಹಾರ ಮತ್ತು ನಾಗರೀಕ ಪೂರೈಕೆ ಹಾಗೂ ಅರಣ್ಯ ಖಾತೆ ಸಚಿವರು, ಹಿರಿಯ ಇತಿಹಾಸ ತಜ್ಞ ಡಾ. ಬಿ. ಶೇಕ್ ಅಲಿ ಹಾಗೂ ಹೆಸರಾಂತ ಭಾಷಾಶಾಸ್ತ್ರಜ್ಞರಾದ ಡಾ. ಕೋಡಿ ಕುಶಾಲಪ್ಪಗೌಡ ಅವರ ಆತ್ಮಕ್ಕೆ ಶಾಂತಿ ಕೋರಿ ಸಭೆ ಸಂತಾಪ ಸೂಚಿಸಿತು. ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ದಿನಾಂಕ ೦೪.೦೮.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೩ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

**ನಿರ್ಣಯ** : ದಿನಾಂಕ ೦೪.೦೮.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿ ೨೧೩ನೇ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೦೪.೦೮.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೩ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

**ನಿರ್ಣಯ** : ದಿನಾಂಕ ೦೪.೦೮.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೩ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿ ಈ ಕೆಳಗಿನಂತೆ ಕ್ರಮವಹಿಸಲು ಸೂಚಿಸಿ ಸಭೆಯು ಅನುಮೋದನೆ ನೀಡಿತು.

೨೧೩ನೇ ಕಾರ್ಯಕಾರಿ ಸಮಿತಿ ವಿಷಯ ಮತ್ತು ನಿರ್ಣಯ ೧೫ರ ಉಪ ಕ್ರಮ ಸಂಖ್ಯೆ (೨)ರ ವಿಷಯಕ್ಕೆ ಸಂಬಂಧಿಸಿದಂತೆ ಡಾ. ವೆಂಕಟಗಿರಿ ದಳವಾಯಿ, ಡಾ. ಅಮರೇಶ ಯತಗಲ್ ಅವರಿಗೆ ಸೇವೆ ಸಲ್ಲಿಸಿದ ಬಗ್ಗೆ ಮಾಹಿತಿ, ದಾಖಲೆಗಳನ್ನು ನೀಡಲು ಸೂಚಿಸಿ ಅವಕಾಶ ಕಲ್ಪಿಸಿದ್ದರೂ ಮಾಹಿತಿ ನೀಡದೇ ಇರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿ ಈ ಸಂಬಂಧ ಕಾನೂನು ತಜ್ಞರ/ಸಲಹೆಗಾರರ ಅಭಿಪ್ರಾಯಗಳನ್ನು ಪಡೆದು ವಿಸ್ತೃತ ಮಾಹಿತಿಯೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸಲು ಸಭೆ ಸೂಚಿಸಿತು.

೨೧೪.೦೧ ದಿನಾಂಕ ೨೯.೦೮.೨೦೨೨ರಂದು ನಡೆದ ೨೦೨೨-೨೩ನೇ ಸಾಲಿನ ಮೊದಲನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆಯ ನಡೆವಳಿ ಕುರಿತು.

ಟಿಪ್ಪಣಿ : ದಿನಾಂಕ ೨೯.೦೮.೨೦೨೨ರಂದು ನಡೆದ ೨೦೨೨-೨೩ನೇ ಸಾಲಿನ ಮೊದಲನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೨೯.೦೮.೨೦೨೨ರಂದು ನಡೆದ ೨೦೨೨-೨೩ನೇ ಸಾಲಿನ ಮೊದಲನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆಯ ನಡೆವಳಿಗಳನ್ನು ಸಭೆಯು ಪರಿಸೀಲಿಸಿ ಅನುಮೋದನೆ ನೀಡಿತು.

೨೧೪.೦೨ ಸೆಪ್ಟೆಂಬರ್ ೦೨, ೨೦೨೨ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳ ಕುರಿತು.

ಟಿಪ್ಪಣಿ : ವಿಶ್ವವಿದ್ಯಾಲಯದ ಶೈಕ್ಷಣಿಕ ವಿಷಯಗಳ ಸಂಬಂಧಿಸಿದಂತೆ ಸೆಪ್ಟೆಂಬರ್ ೦೨, ೨೦೨೨ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೨.೯.೨೦೨೨ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಪಿಎಚ್.ಡಿ. ಮೌಲ್ಯಮಾಪಕರ ಪಟ್ಟಿಯನ್ನು ಸಲ್ಲಿಸದಿರುವ ವಿಭಾಗಗಳಿಂದ ಶೀಘ್ರದಲ್ಲೇ ತರಿಸಿಕೊಳ್ಳಲು ಕ್ರಮವಹಿಸುವಂತೆ ಸೂಚಿಸಿ ಅನುಮೋದನೆ ನೀಡಿತು.

೨೧೪.೦೩ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕ (Assistant Professor) ಮಂಜೂರಾದ ಹುದ್ದೆಗಳ ವಿಷಯಗಳು/ವಿಭಾಗಗಳ ಮಾಹಿತಿಯನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಕೋರಿರುವ ಕುರಿತು.

ಟಿಪ್ಪಣಿ : ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕ (Assistant Professor) ಮಂಜೂರಾದ ಹುದ್ದೆಗಳ ವಿಷಯಗಳು/ವಿಭಾಗಗಳ ಮಾಹಿತಿಯನ್ನು ಉನ್ನತ ಶಿಕ್ಷಣ ಪರಿಷತ್ತು ಕೋರಿರುವ ಕುರಿತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಪತ್ರ ಸಂಖ್ಯೆ ಕರಾಉಶಿಪ/Asst. Prof/೨೦೨೨-೨೩/೬೧೩ ದಿನಾಂಕ ೩೦.೦೮.೨೦೨೨ರ ಪತ್ರದ ಕುರಿತು ಉನ್ನತ ಶಿಕ್ಷಣ ಪರಿಷತ್‌ಗೆ ಮಾಹಿತಿಯನ್ನು ನೀಡಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕ (Assistant Professor) ಮಂಜೂರಾದ ಹುದ್ದೆಗಳ ವಿಷಯ ಹಾಗೂ ವಿಭಾಗವಾರು ಮಾಹಿತಿಯನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೨೧೪.೦೪ ದಿನಾಂಕ ೧೭.೦೮.೨೦೨೨ರಂದು ನಡೆದ ದೂರಶಿಕ್ಷಣ ನಿರ್ದೇಶನಾಲಯದ ಉನ್ನತ ಸಲಹಾ ಮಂಡಳಿ ೨೧ನೇ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೧೭.೦೮.೨೦೨೨ರಂದು ನಡೆದ ದೂರಶಿಕ್ಷಣ ನಿರ್ದೇಶನಾಲಯದ ಉನ್ನತ ಸಲಹಾ ಸಮಿತಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ದೂರಶಿಕ್ಷಣ ನಿರ್ದೇಶನಾಲಯವನ್ನು ಮುಂದುವರಿಸುವ ಬಗ್ಗೆ ಕರ್ನಾಟಕ ಸರ್ಕಾರಕ್ಕೆ ಪತ್ರ ಬರೆಯಲು ಹಾಗೂ ಈ ಸಂಬಂಧ ಉನ್ನತ ಶಿಕ್ಷಣ ಸಚಿವರನ್ನು ಭೇಟಿ ಮಾಡಲು ಸೂಚಿಸಿ ಅನುಮೋದನೆ ನೀಡಿತು.

೨೧೪.೦೫ ಹಸ್ತಪ್ರತಿಶಾಸ್ತ್ರ ವಿಭಾಗದ ಹಿರಿಯ ವಿದ್ಯಾರ್ಥಿಗಳ ದತ್ತಿನಿಧಿ ಸ್ಥಾಪನೆಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ಟಿಪ್ಪಣಿ : ಹಸ್ತಪ್ರತಿಶಾಸ್ತ್ರ ವಿಭಾಗದ ರಜತಮಹೋತ್ಸವದ ವರ್ಷಾಚರಣೆಯ ಸಂದರ್ಭದಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗದ ವಿದ್ಯಾರ್ಥಿಗಳ ದತ್ತಿನಿಧಿ ಸ್ಥಾಪಿಸಲಾಗುತ್ತಿದ್ದು, ಸದರಿ ದತ್ತಿನಿಧಿ ಸ್ಥಾಪನೆಗೆ ಈವರೆಗೆ ವಿಭಾಗದ ವಿದ್ಯಾರ್ಥಿಗಳಿಂದ ೩,೦೯,೬೧೧/-ಗಳನ್ನು ಹಣಕಾಸು ವಿಭಾಗಕ್ಕೆ ಆನ್‌ಲೈನ್ ಮೂಲಕ ಪಾವತಿಸಲಾಗಿದೆ. ಈ ಹಿನ್ನೆಲೆಯಲ್ಲಿ **'ಹಸ್ತಪ್ರತಿಶಾಸ್ತ್ರ ವಿಭಾಗದ ಹಿರಿಯ ವಿದ್ಯಾರ್ಥಿಗಳ ದತ್ತಿನಿಧಿ'** ಹೆಸರಿನಲ್ಲಿ ದತ್ತಿನಿಧಿಯನ್ನು ಸ್ಥಾಪನೆಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಪರಿಶೀಲಿಸಿ ನಿಯಮಾನುಸಾರ **'ಹಸ್ತಪ್ರತಿಶಾಸ್ತ್ರ ವಿಭಾಗದ ಹಿರಿಯ** (Alumini) **ವಿದ್ಯಾರ್ಥಿಗಳ ದತ್ತಿನಿಧಿ'** ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು.

೨೧೪.೦೬ ಕನ್ನಡ ವಿಶ್ವವಿದ್ಯಾಲಯದ ೨೦೧೯-೨೦ನೇ ಸಾಲಿನ ವಾರ್ಷಿಕ ವರದಿಯನ್ನು ಮುದ್ರಿಸಿ ಸರ್ಕಾರಕ್ಕೆ ಸಲ್ಲಿಸುವ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ೨೦೧೯-೨೦ನೇ ಸಾಲಿನ ವಾರ್ಷಿಕ ವರದಿಯನ್ನು ಸಿದ್ಧಪಡಿಸಲಾಗಿದ್ದು, ಅದನ್ನು ಮುದ್ರಿಸಿ ಸರ್ಕಾರಕ್ಕೆ ಸಲ್ಲಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಪರಿಶೀಲಿಸಿ ಸಿದ್ಧಪಡಿಸಲಾದ ೨೦೧೯-೨೦ನೇ ಸಾಲಿನ ವಾರ್ಷಿಕ ವರದಿಯನ್ನು ಮುದ್ರಿಸಿ ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.

೨೧೪.೦೭ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಂದಿಗೆ ಕನ್ನಡ ವಿಶ್ವವಿದ್ಯಾಲಯದಲ್ಲಿ ಕನ್ನಡ ಕೌಶಲ್ಯ ತರಬೇತಿಯನ್ನು ನಡೆಸುವ ಕುರಿತು.

ನಿರ್ಣಯ : ಸದರಿ ವಿಷಯ ಕುರಿತು ಪರಿಶೀಲಿಸಿ ಕನ್ನಡ ವಿಶ್ವವಿದ್ಯಾಲಯವು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಂದಿಗೆ ಕನ್ನಡ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ನಡೆಸಲು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಭೆಯು ತೀರ್ಮಾನಿಸಿತು.

೨೧೪.೦೮ ಕನ್ನಡ ವಿಶ್ವವಿದ್ಯಾಲಯದ ನುಡಿಹಬ್ಬ ೩೧ರ ನಾಡೋಜ ಗೌರವ ಪದವಿಗೆ ಪರಿಗಣಿಸಬಹುದಾದ ಸಾಧಕರ ಪಟ್ಟಿಯನ್ನು ಪರಿಷ್ಕರಿಸಿ ಅಂತಿಮಗೊಳಿಸುವ ಕುರಿತು.

ನಿರ್ಣಯ : ೨೧೩ನೇ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯ ಸಂಖ್ಯೆ ೨೧೩.೦೭ರ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಕಾರ್ಯಕಾರಿ ಸಮಿತಿಯು ಶಿಫಾರಸ್ಸು ಮಾಡಿದ ೧೦ ಮಂದಿ ಸಾಧಕರ ಪಟ್ಟಿಯ ಜೊತೆಗೆ ಈ ಕೆಳಗೆ ಸೂಚಿಸಲಾದ ಸಾಧಕರಿಬ್ಬರನ್ನು ಸೇರ್ಪಡೆಗೊಳಿಸಲು ಸಭೆಯು ತೀರ್ಮಾನಿಸಿ ಶಿಫಾರಸ್ಸು ಮಾಡಿತು.

೧. ಡಾ.ಸಿ.ಎನ್. ಮಂಜುನಾಥ – ವೈದ್ಯಕೀಯ / ಸಾಮಾಜಿಕ ಸೇವೆ

೨. ಶ್ರೀ ಎಸ್. ಷಡಕ್ಷರಿ – ಸಾಹಿತ್ಯ / ಉದ್ಯಮ

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು